ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ. ಮಲ್ಲೇಶ್ವರಂ. ಬೆಂಗಳೂರು

**********************************************************************************

ಸಂ:ಗಣಕಶಾಖೆ/ಹೊಸ ತಂತ್ರಾಂಶ/03/2019-20 ದಿನಾಂಕ: 23/07/2019

- ಜ್ಞಾಪನಾ -

ವಿಷಯ: ಎಸ್.ಎಸ್.ಎಲ್.ಸಿ ಪರೀಕ್ಷೆಯ ವಲಸೆ ಪ್ರಮಾಣ ಪತ್ರವನ್ನು ಆನ್‌ಲೈನ್ ಮೂಲಕ ಪಡೆಯುವ ಬಗ್ಗೆ.
ಉಲ್ಲೇಖ : ಈ ಕಚೇರಿ ಪತ್ರ ಸಂಖ್ಯೆ ಎ8/ವ.ಪ್ರ.ಪ/17/2019-20 ದಿನಾಂಕ: 16/07/2019

*****

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಪ್ರಗತಿ-10ರ ಯೋಜನೆಯಡಿಯಲ್ಲಿ ಮಂಡಳಿಯ ಸೇವೆಗಳನ್ನು ಗಣಕೀಕರಣಗೊಳಿಸುವ ಪ್ರಕ್ರಿಯೆಯಲ್ಲಿ ಎಸ್.ಎಸ್.ಎಲ್.ಸಿ ವಲಸೆ ಪ್ರಮಾಣ ಪತ್ರ (Migration Certificate)ವನ್ನು ಆನ್‌ಲೈನ್ ಮೂಲಕ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಕರ್ನಾಟಕದ ಹೊರಗಿನ ಶೈಕ್ಷಣಿಕ ಸಂಸ್ಥೆಗಳಲ್ಲಿ ವ್ಯಾಸಂಗ ಮುಂದುವರೆಸುವ ವಿದ್ಯಾರ್ಥಿಗಳಿಗೆ ಈ ಪ್ರಮಾಣ ಪತ್ರವು ಅತ್ಯಗತ್ಯವಾಗಿದ್ದು, ಈ ಬಗ್ಗೆ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಮಾಹಿತಿಯನ್ನು ನೀಡುವುದು. ಇನ್ನೂ ಮುಂದೆ ವಲಸೆ ಪ್ರಮಾಣ ಪತ್ರಕ್ಕಾಗಿ ಮಂಡಲಿಗೆ ಅರ್ಜಿ ಸಲ್ಲಿಸಿ ಭೌತಿಕವಾಗಿ ಪಡೆಯುವುದನ್ನು ನಿಲ್ಲಿಸಲಾಗಿದೆ. ಇದರಿಂದ ಅತ್ಯಂತ ಕಡಿಮೆ ಅವಧಿಯಲ್ಲಿ ವಲಸೆ ಪ್ರಮಾಣ ಪತ್ರವನ್ನು ಪಡೆಯಬಹುದಾಗಿದೆ. ಈ ಸೇವೆಯಲ್ಲಿ ವಿದ್ಯಾರ್ಥಿಯು / ಪೋಷಕರು ನಿಗದಿತ ಶುಲ್ಕ ರೂ.350.00 ಗಳನ್ನು ಆಫ್‌ಲೈನ್ (ಚಲನ್ ಮೂಲಕ) ಇಲ್ಲವೇ ಆನ್‌ಲೈನ್ ಮೂಲಕ ಪಾವತಿಸಿದ ತಕ್ಷಣವೇ ಪ್ರಮಾಣ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಈ ಸೇವೆಯನ್ನು ಮಂಡಳಿಯ ಜಾಲತಾಣವಾದ http://www.kseeb.kar.nic.inನ ಆನ್‌ಲೈನ್ ಸೇವೆಗಳು ಮೂಲಕ ಪಡೆಯಬಹುದಾಗಿದೆ. ಈ ಸೇವೆಗಳು ಏಪ್ರಿಲ್ 2019 ಮತ್ತು ಜೂನ್ 2019ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣವಾದ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತದೆ.

(ಸುಮಂಗಲ. ವಿ) 23/7/19
ನಿರ್ದೇಶಕರು, ಪರೀಕ್ಷೆಗಳು

ಅಗತ್ಯ ಕ್ರಮಕ್ಕಾಗಿ,

1) ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದ ನಿಮಿತ್ತ ಸಹನಿರ್ದೇಶಕರು,
   ಕ.ಪ್ರೌ.ಶಿ.ಪ.ಮಂ,
   ಬೆಂಗಳೂರು, ಮೈಸೂರು, ಕಲ್ಬುರ್ಗಿ ಮತ್ತು ಬೆಳಗಾಂ ವಿಭಾಗ
2) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ
3) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ
4) ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗು ಮಾನ್ಯತೆ ಪಡೆದಿರುವ ಖಾಸಗಿ ಅನುದಾನರಹಿತ ಪ್ರೌಢಶಾಲೆಗಳ ಮುಖ್ಯಸ್ಥರಿಗೆ

C:\Users\HOME\Documents\Circular & User Manuals 2019\Migration Certifiacte.docx